ದಿನಾಂಕ 31.01.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 1 ಮತ್ತು 2ನೇ ಪ್ರತಿವಾದಿಗಳ ಪರ ಶ್ರೀ ಆರ್.ಬಿ., ವಕೀಲರಿಂದಃ-

12. ದಾವಾ ಸ್ವತ್ತಿನ ಸುತ್ತಮುತ್ತಲಿನ ಸ್ವತ್ತುಗಳ ಮಾರುಕಟ್ಟೆ ಮೌಲ್ಯ ಹಾಗೂ ಸರ್ಕಾರಿ ಮೌಲ್ಯ ಶೇಕಡ 30ರಷ್ಟು ಹೆಚ್ಚಾಗಿದೆ ಎನ್ನುವುದು ಸರಿಯಲ್ಲ. ದಾವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ಹಾಗೂ ಸರ್ಕಾರಿ ಮೌಲ್ಯ ಈಗ ಶೇಕಡ 30ರಷ್ಟು ಹೆಚ್ಚಾಗಿದೆ ಎನ್ನುವುದು ಸರಿಯಲ್ಲ. 1 ರಿಂದ 4ನೇ ಪ್ರತಿವಾದಿಗಳು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ ಎಂದು ಬರೆಸಿರುವ ವಿಚಾರ ಸುಳ್ಳು ಎನ್ನುವುದು ಸರಿಯಲ್ಲ. ಪ್ರತಿವಾದಿಗಳು ಕರಾರು ಪತ್ರದ ಷರತ್ತುಗಳ ಪ್ರಕಾರ ನಡೆದುಕೊಂಡಿಲ್ಲವೆಂದು ಹೇಳುತ್ತಿರುವುದು ಸುಳ್ಳು ಎನ್ನುವುದು ಹಾಗೂ ನಾವೇ ಕ್ರಯದ ಕರಾರು ಪತ್ರದ ಷರತ್ತುಗಳ ಪ್ರಕಾರ ನಡೆದುಕೊಂಡಿಲ್ಲ ಎನ್ನುವುದು ಸರಿಯಲ್ಲ.

13. ನೀವು ದಾವಾ ಸ್ವತ್ತಿನಲ್ಲಿ ಲೇಔಟ್ ನಿರ್ಮಿಸಲು ಅನುಮತಿ ಪಡೆದುಕೊಂಡಿದ್ದೀರಾ? ಎಂದರೆ ಸಾಕ್ಷಿಯು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಿಮಗೆ ನಿವೇಶನಗಳನ್ನು ಮಾರಾಟ ಮಾಡಲು ಹಕ್ಕಿರಲಿಲ್ಲ? ಎಂದರೆ ಸಾಕ್ಷಿಯು ತಲಾ 20 ನಿವೇಶನಗಳಂತೆ ಮಾಡಿ ಕರೆದಾಗ ಪ್ರತಿವಾದಿಗಳು ಬಂದು ನೋಂದಣಿ ಮಾಡಿಸಿಕೊಡುವುದಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ಈ ರೀತಿಯಾದ ಷರತ್ತು ಕ್ರಯದ ಕರಾರು ಪತ್ರದಲ್ಲಿ ಇಲ್ಲ ಎನ್ನುವುದು

ಸರಿಯಲ್ಲ. ನಾವು ಪ್ರತಿವಾದಿಗಳನ್ನು ಪುಟ್ಟಸ್ವಾಮಿ ಎಂಬ ಸಾಕ್ಷಿದಾರರ ಸಮಕ್ಷಮ ಕರಾರು ಪತ್ರದಲ್ಲಿ ನಿಗದಿಪಡಿಸಲಾಗಿದ್ದ 7 ತಿಂಗಳ ಅವಧಿಯಲ್ಲಿ ಸುಮಾರು 20 ಬಾರಿ ಭೇಟಿಯಾಗಿರುತ್ತೇನೆ. ನಾನು ಪ್ರತಿವಾದಿಗಳನ್ನು ಒಂದು ಬಾರಿಯೂ ಸಹ ಭೇಟಿ ಮಾಡಿಲ್ಲ ಎನ್ನುವುದು ಸರಿಯಲ್ಲ. ಈ ಅಂಶವನ್ನು ಸಾಬೀತುಪಡಿಸಲು ನನ್ನ ಬಳಿ ಯಾವುದೇ ಸಾಕ್ಷಿ ಇಲ್ಲ ಎನ್ನುವುದು ಸರಿಯಲ್ಲ.

14. ಪ್ರತಿವಾದಿಗಳಿಗೆ ನಾವು 60,00,000/- ರೂಗಳನ್ನು ಪಾವತಿಸಿದ್ದು, 1,20,00,000/- ರೂಗಳ ಬಾಕಿ ಇರುತ್ತದೆ. ದಿನಾಂಕ 17.06.2015 ರ ನಿಪಿ-3 ರ ಪ್ರತ್ಯುತ್ತರ ನೋಟಿಸ್‌ನಲ್ಲಿ ನಾವು ಪ್ರತಿವಾದಿಗಳಿಗೆ 60,00,000/- ರೂಗಳನ್ನು ನಗದಾಗಿ ಹಾಗೂ 60,00,000/- ರೂಗಳನ್ನು ಡಿ.ಡಿ ಮೂಲಕ ಪಾವತಿಸಿರುವುದಾಗಿ ಸುಳ್ಳು ಬರೆಸಿದ್ದೇವೆ ಎನ್ನುವುದು ಸರಿಯಲ್ಲ. ನನ್ನ ಪ್ರಮಾಣಪತ್ರದ 18 ನೇ ಖಂಡಿಕೆಯಲ್ಲಿ ಪ್ರತಿವಾದಿಗಳು ನಮಗೆ ನೀಡಿರುವ ನೋಟಿಸ್ ಹಾಗೂ ನಾವು ಪ್ರತಿವಾದಿಗಳಿಗೆ ನೀಡಿರುವ ಪ್ರತ್ಯುತ್ತರ ನೋಟಿಸ್‌ಗೆ ಸಂಬಂಧಿಸಿದ ತಾರೀಖು, ತಿಂಗಳು ಹಾಗೂ ವರ್ಷವನ್ನು ಕಾಣಿಸುವಾಗ ವರ್ಷವನ್ನು ತಪ್ಪಾಗಿ ಕಾಣಿಸಲಾಗಿದೆ ಎಂದರೆ ಸಾಕ್ಷಿಯು ಸುಮ್ಮನಿರುತ್ತಾರೆ. ನಾವು ಪ್ರತಿವಾದಿಗಳಿಗೆ ಯಾವುದೇ ನೋಟಿಸನ್ನು ಕೊಟ್ಟಿಲ್ಲ ಎನ್ನುವುದು ಹಾಗೂ ಪ್ರತಿವಾದಿಗಳ ನೋಟಿಸ್‌ಗೆ ಕೇವಲ ಪ್ರತ್ಯುತ್ತರ ನೋಟಿಸನ್ನು ಕೊಟ್ಟಿರುವುದು ಎನ್ನುವುದು ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತನ್ನು ನಮಗೆ ಕ್ರಯಕ್ಕೆ ಕೊಟ್ಟು

15. ಬೆಂಗಳೂರಿನಲ್ಲಿ ಬೇರೆ ಸ್ವತ್ತನ್ನು ಖರೀದಿಸುವ ಉದ್ದೇಶಕ್ಕಾಗಿ ನಮ್ಮೊಂದಿಗೆ ಕರಾರು ಪತ್ರವನ್ನು ಮಾಡಿಕೊಂಡದ್ದು ಎನ್ನುವುದು ನನಗೆ

ಗೊತ್ತಿಲ್ಲ. ಕರಾರು ಪತ್ರವಾದ 7 ತಿಂಗಳಲ್ಲಿ ನಾವು ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಳ್ಳದ ಕಾರಣ ಪ್ರತಿವಾದಿಗಳಿಗೆ ಬಹಳ ತೊಂದರೆಯಾಗಿದೆ? ಎಂದರೆ ಸಾಕ್ಷಿಯು ಪಹಣಿಗಳಲ್ಲಿ ನಿರ್ಬಂಧಕಾಜ್ಞೆ ಆದೇಶ ದಾಖಲಾಯಿತು ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ನಮ್ಮ ಕಡೆಯಿಂದ ಅವರಿಗೆ ತೊಂದರೆಯಾಗಿದ್ದರೂ ಸಹ ಅವರ ವಿರುದ್ಧ ಈ ಸುಳ್ಳು ದಾವೆಯನ್ನು ದಾಖಲಿಸಿದ್ದೇವೆ ಎನ್ನುವುದು ಸರಿಯಲ್ಲ.

3 ಮತ್ತು 4 ನೇ ಪ್ರತಿವಾದಿಗಳ ಪರ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.